## ಗೌರವಾನ್ವಿತ ಪ್ರಧಾನ ಕಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ

## ತುಮಕೂರು

**ಮೂಲದಾವಾ ನಂಬರ್.231/2017**

| | | |
|---|---|---|
| ವಾದಿ | : | ಕೆಂಪಸಿದ್ದಯ್ಯ |
| | ವಿರುದ್ದ | |
| ಪ್ರತಿವಾದಿಗಳು | : | ಜಯಮ್ಮ ಮತ್ತು ಇತರರು |

**ಪ್ರತಿವಾದಿಗಳ ಪರ ಸಾಕ್ಷಿಯ ಮುಖ್ಯ ವಿಚಾರಣೆ ಪ್ರಮಾಣಪತ್ರದ ಮೂಲಕ**

**(ಡಿಡಬ್ಲ್ಯೂ- )**

Kumar 9/6/2026.

| | | |
|---|---|---|
| ಹೆಸರು | : | ನಿರಂಜನಮೂರ್ತಿ.ಎಂ.ಈ. |
| ತಂದೆಯ ಹೆಸರು | : | ಈಶ್ವರಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಮಾದೇನಹಳ್ಳಿ, ಚೇಳೂರು ಹೋಬಳಿ, ಗುಬ್ಬಿ ತಾಲ್ಲೂಕು. |

ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವನ್ನೇ ಹೇಳುತ್ತೇನೆ. ಸತ್ಯವನ್ನಲ್ಲದೆ ಬೇರೇನೂ ಹೇಳುವುದಿಲ್ಲ. ನಾನು ಹೇಳುವುದೆಲ್ಲಾ ಸತ್ಯ.

ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸಿಯಾಗಿದ್ದೇನೆ. ನನ್ನ ತಂದೆಯ ಹೆಸರು ಈಶ್ವರಯ್ಯ ಆಗಿರುತ್ತದೆ.ನನ್ನ ತಂದೆಗೆ ಈಶ್ವರಪ್ಪ ಎಂತಲೂ ಸಹ ಕರೆಯುತ್ತಿದ್ದರು. ನನ್ನ ತಂದೆಯು ಈಗ ಜೀವಂತವಾಗಿರುವುದಿಲ್ಲ. ಅವರ ಜೀವಿತಾವಧಿಯಲ್ಲಿ ಹಲವಾರು ಸಹಿಗಳನ್ನು ನನ್ನ ಮುಂದೆಯೇ ಮಾಡಿರುತ್ತಾರೆ ಅಂದರೆ ಬ್ಯಾಂಕಿನಲ್ಲಿ, ಸೊಸೈಟಿಯಲ್ಲಿ ಮತ್ತು ಇತರೆ ವ್ಯವಹಾರಗಳಲ್ಲಿ ಸಹಿ ಮಾಡಿರುತ್ತಾರೆ. ಆದ್ದರಿಂದ ನಾನು ನನ್ನ ತಂದೆಯ ಸಹಿಯ ಬಗ್ಗೆ ನಿಖರತೆ ಹೊಂದಿರುತ್ತೇನೆ. ಇದು ಅಲ್ಲದೆ ನನ್ನ ತಂದೆಯವರು ಬದುಕಿರುವಾಗ ಸಣಬನಹಳ್ಳಿ ಗ್ರಾಮದ ವಾಸಿ ಸಿದ್ದಪ್ಪನವರ ಮಗ ಕೆಂಪಸಿದ್ದಯ್ಯ ಮತ್ತು ದೊಡ್ಡನರಸಯ್ಯನ ಹೆಂಡತಿ ಲಕ್ಕಮ್ಮನ ಮಧ್ಯೆ 1983 ರಲ್ಲಿ ಒಂದು ನೋಂದಣಿಯಿಲ್ಲದ ಕ್ರಯದ ಕರಾರುಪತ್ರ ಆಗಿದ್ದು, ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆಂದು ಹಲವು ಸಾರಿ ನನಗೆ ಹೇಳಿದ್ದು

ಎಂ.ಈ. ನಿರಂಜನಮೂರ್ತಿ

NOTARY * INDIA

ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ನನ್ನ ತಂದೆ ಈಗ ಜೀವಂತವಾಗಿಲ್ಲ. ಕೆಂಪಸಿದ್ದಯ್ಯ ಮತ್ತು ಲಕ್ಕಮ್ಮನ ಮಧ್ಯೆ ಆಗಿರುವ ಕ್ರಯದ ಕರಾರುಪತ್ರವನ್ನು ತೋರಿಸಿದರೆ ಅದರಲ್ಲಿರುವ ನನ್ನ ತಂದೆಯ ಸಹಿಯನ್ನು ಗುರ್ತಿಸುತ್ತೇನೆ. ಅದು ನನ್ನ ತಂದೆಯ ಸಹಿಯೇ ಆಗಿರುತ್ತದೆ.

ದಾವಾ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಜಯಮ್ಮನವರು ಲಕ್ಕಮ್ಮನವರ ಮಗಳಾಗಿದ್ದು, ದಾವಾ ಸ್ವತ್ತಿನಲ್ಲಿ ಜಯಮ್ಮನವರೇ ಸ್ವಾಧೀನಾನುಭವದಲ್ಲಿದ್ದು ಕ್ರಮಬದ್ಧವಾಗಿ ಬೆಳೆಯುತ್ತಿರುವುದನ್ನು ಬಲ್ಲವನಾಗಿ ಈ ಸಾಕ್ಷ್ಯ ನುಡಿಯುತ್ತಿದ್ದೇನೆ.

ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಈ ಕೆಳಗೆ ಸಹಿ ಮಾಡಿರುತ್ತೇನೆ.

ಗುರುತುಬಲ್ಲವರು,

Lakshmamurthy. N.B

ವಕೀಲರು.

ದಿನಾಂಕ: 9/06/2026

ಪ್ರಮಾಣಕರ್ತ

NOTARY * GOVT. OF INDIA

T.S. MAHANTHESH

SWORN TO BEFORE ME

9.6.26

T.S. MAHANTHESH B.A., LL.B.,
Advocate And Notary
GOVT. OF INDIA
Regd. No. 19870
GUBBI TALUK & TOWN,
Tumkuru Dist., Karnataka-572 216